# ದಾಂಪತ್ಯ ಬದುಕಿನ ಚಿನ್ನದ ಹಬ್ಬ

ಹೊಸ್ಕೋಟೆ ಶ್ರೀಮತಿ ಲೀಲಾವತಿ ಮತ್ತು ಶ್ರೀ ಎಚ್. ಹಿರಿಯಣ್ಣರಾವ್‌ರವರ ದಾಂಪತ್ಯ ಜೀವನದ ಚಿನ್ನದ ಹಬ್ಬದ ಸಂಭ್ರಮವನ್ನು ಸಂತಸ ಸಡಗರದಿಂದ ಹೊಸ್ಕೋಟೆಯ ಸ್ವಗೃಹದಲ್ಲಿ ತಾ.25-05-2008ನೇ ಆದಿತ್ಯವಾರ ಬೆಳಿಗ್ಗೆ ಗಣಹೋಮ ಮತ್ತು ಸತ್ಯನಾರಾಯಣ ಪೂಜೆಯೊಂದಿಗೆ ಧಾರ್ಮಿಕ ಕಾರ್ಯಕ್ರಮದೊಂದಿಗೆ ಆಚರಿಸಿದರು.

ಬೆಳಿಗ್ಗೆ 10-00ಗಂಟೆಗೆ ಸಭಾಕಾರ್ಯಕ್ರಮವು ಕುಂದಾಪುರ ತಾಲೂಕು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಕೆ. ಉಮೇಶ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಕುಮಾರಿ ದೀಪಿಕಾ ಹೊಸ್ಕೋಟೆ, ಕುಮಾರಿ ಮಧುರ, ಕುಮಾರಿ ರಚನಾರವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡಿತು. ಶ್ರೀ ಗಣೇಶಮೂರ್ತಿ ಗುಂಡ್ಮಿ ಇವರು ಸ್ವಾಗತಿಸಿದರು. ನಂತರ ಕಾರ್ಯಕ್ರಮದ ಕೇಂದ್ರ ಬಿಂದುವಾದ ಶ್ರೀ ಎಚ್. ಹಿರಿಯಣ್ಣರಾವ್ ದಂಪತಿಗಳನ್ನು ಕಲಶಕನ್ನಡಿಯೊಂದಿಗೆ ಎದುರುಗೊಂಡು 50ವರ್ಷದ ಹಿಂದಿನ ಮದುವೆಯ ಸವಿನೆನಪನ್ನು ನೆನಪಿಸುವಂತೆ ದಿಬ್ಬಣವನ್ನು ಸ್ವಾಗತಿಸಿ ವಧುವನ್ನು ಮಂಟಪಕ್ಕೆ (ವೇದಿಕೆ) ಮಾಲೆಯೊಂದಿಗೆ ಕರೆತಂದು ತೆರೆಯಮರೆಯೊಂದಿಗೆ ಮಾಲೆಗಳನ್ನು ವಿನಿಮಯಗೊಳಿಸಿದರು. ಮನೆಯ ಮಕ್ಕಳು ವಧು-ವರರಿಗೆ ಉಡುಗೊರೆಯನ್ನು ನೀಡಿ ಆಶೀರ್ವಾದ ಪಡೆದರು. ವಧುವಿನ ತವರುಮನೆ ಉಡುಗೊರೆಯನ್ನು ದಿ। ಚೇತಿಪಾಲ ನರಸಿಂಹರಾವ್‌ರವರ ಧರ್ಮಪತ್ನಿ ಶ್ರೀಮತಿ ಯಶೋದಮ್ಮ ಮತ್ತು ಮಕ್ಕಳು ನೆರವೇರಿಸಿದರು. ಶ್ರೀ ಎಚ್. ಲಕ್ಷ್ಮಿನಾರಾಯಣರಾವ್ ಪ್ರಾಸ್ತಾವಿಕ ಭಾಷಣಗೈದರು. ಶ್ರೀ ಬಿ. ದೇವರಾಜ ಹೆಬ್ಬಾರ ಶ್ರೀ ಎಚ್. ಹಿರಿಯಣ್ಣರಾವ್ ರವರ ಪರಿಚಯವನ್ನು ಸಭೆಯ ಮುಂದಿಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಶಾರದಾಪೀಠ ಶೃಂಗೇರಿ ಕೋಟೆಕಾರು ಶಾಖೆಯ ಧರ್ಮಾಧಿಕಾರಿ ಶ್ರೀ ಸತ್ಯ ಶಂಕರ ಬೊಳ್ಳಾವ ಇವರು ಶಾರದಾಂಬೆಯ ಪ್ರಸಾದವನ್ನು ನೀಡಿ ಸುದೀರ್ಘಕಾಲ ದಾಂಪತ್ಯ ಜೀವನ ಅನುಗ್ರಹಿಸಲಿ ಎಂದು ಶುಭ ಹಾರೈಸಿದರು. ಅನೇಕ ಮಹನೀಯರು ಕಳುಹಿಸಿದ ಶುಭಸಂದೇಶವನ್ನು ಶ್ರೀ ಎಚ್. ಆನಂದ ರಾವ್ ಸಭೆಯ ಮುಂದೆ ವಾಚಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಉಪ್ಪುಂದ ಚಂದ್ರಶೇಖರ ಹೊಳ್ಳ, ಭಾರತೀಯ ಕಿಸಾನ ಸಂಘದ ಜಿಲ್ಲಾ ಕಾರ್ಯದರ್ಶಿ ಶ್ರೀ ಸತ್ಯನಾರಾಯಣ ಉಡುಪ, ಶ್ರೀ ಜೆ. ಅಚ್ಯುತ ಹೆಬ್ಬಾರ ಸಂದರ್ಭೋಚಿತವಾಗಿ ಮಾತನಾಡಿ ದಂಪತಿಗಳಿಗೆ ಶುಭ ಹಾರೈಸಿದರು. ಸಭಿಕರ ಪರವಾಗಿ ಪ್ರೊ। ಶಂಕರರಾವ್ ಕಾಳಾವರ, ಶ್ರೀ ಪಿ. ಶೇಷಪ್ಪಯ್ಯ, ಶ್ರೀ ಸದಾಶಿವರಾವ್ ಉಬ್ಬೈಲ, ಶ್ರೀ ವಿಷ್ಣುಮೂರ್ತಿರಾವ್, ಚಳ್ಳಕೆರೆ, ಶ್ರೀ ವಿಶ್ವನಾಥ ಶೆಟ್ಟಿ, ಶ್ರೀ ಭಾಸ್ಕರರಾವ್ ದಂಪತಿಗಳಿಗೆ ಪುಷ್ಪಗುಚ್ಛನೀಡಿ ಶುಭ ಹಾರೈಸಿದರು.

ಶ್ರೀ ಎಚ್. ಹಿರಿಯಣ್ಣರಾವ್‌ರವರ ಗುರುಗಳಾದ ಶ್ರೀ ರಾಮಪ್ಪಯ್ಯ ಕಾರಂತ ಕೊಡೇರಿ ಇವರು ಶಿಷ್ಯನಿಗೆ ಪುಸ್ತಕನೀಡಿ ಆಶಿರ್ವಚಿಸಿದರು. ಗುರುಗಳಿಗೆ ದಂಪತಿಗಳು ಫಲಪುಷ್ಪ ಮತ್ತು ಸ್ಮರಣಿಕೆಯನ್ನು ನೀಡಿ ಗುರುಕಾಣಿಕೆಯನ್ನು ನೀಡುವುದರೊಂದಿಗೆ ಗುರು ಮತ್ತು ಶಿಷ್ಯರ ಮೊಗದಲ್ಲಿ ಸಂತಸ ಭಾವೋದ್ವೇಗದ ಸನ್ನಿವೇಶವು ಸಭಿಕರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯಿತು.

ಮಧ್ಯಾಹ್ನ 3-30ರಿಂದ ಸಂಜೆ 6-30ರ ತನಕ ಮೈತ್ರೇಯ ಮಹಿಳಾ ಯಕ್ಷಗಾನ ತಾಳಮದ್ದಳೆ ವೇದಿಕೆ ನಿಟ್ಟೂರು ಇವರಿಂದ "ಕೃಷ್ಣಸಂಧಾನ" ತಾಳಮದ್ದಳೆ ಏರ್ಪಡಿಸಲಾಯಿತು.

ಶ್ರೀ ಮಂಜುನಾಥ ಹೆಬ್ಬಾರ ಉಪ್ಪಿನಕುದ್ರು, ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ವೆಂಕಟೇಶ ರಾವ್ ಧನ್ಯವಾದ ಅರ್ಪಿಸಿದರು.

**ವರದಿ : ಎಚ್. ಆನಂದರಾವ್, ಹೊಸ್ಕೋಟೆ.**

## ಭಾರತ ಭಾಗವತಗಳಲ್ಲಿ ಧೃತರಾಷ್ಟ್ರಾದಿಗಳ ಕೊನೆಯ ದಿನಗಳು

(...2ನೇ ಪುಟದಿಂದ)

ನಾಯಿಯೂ ಸ್ವರ್ಗದ ಬಾಗಿಲಿನವರೆಗೆ ಹೋದರು. ಕೊನೆಗೆ ಎಲ್ಲರೂ ಸ್ವರ್ಗವನ್ನು ಸೇರಿದರು. ಧರ್ಮಜನ ಪರೀಕ್ಷೆಗಾಗಿ ಯಮನೇ ನಾಯಿಯಾಗಿದ್ದನು.

ಆದರೆ ಭಾಗವತದಲ್ಲಿ ಈ ಎಲ್ಲ ಪ್ರಸಂಗಗಳು ಬೇರೆಯೇ ರೀತಿಯಲ್ಲಿ ಪ್ರಸ್ತುತವಾಗಿವೆ.

ಬಂಧು ಹತ್ಯೆಗೆ ಪ್ರಾಯಶ್ಚಿತ್ತವಾಗಿ ಯುಧಿಷ್ಠಿರನು ಮೂರು ಅಶ್ವಮೇಧಯಾಗಗಳನ್ನು ನೇವೇರಿಸಿದನು. ಈ ಸಂದರ್ಭಕ್ಕಾಗಿ ಬಂದ ಶ್ರೀ ಕೃಷ್ಣನು ಅರ್ಜುನನನ್ನು ಕರೆದುಕೊಂಡು ದ್ವಾರಕೆಗೆ ಹಿಂದಿರುಗಿದನು. ತೀರ್ಥಯಾತ್ರೆಗೆ ಹೋಗಿದ್ದ ವಿದುರನು ಪುನಃ ಹಸ್ತಿನಾವತಿಗೆ ಬಂದನು. ಆದರೆ ಮೈತ್ರೇಯ ಋಷಿಯಿಂದ ಆತ್ಮಜ್ಞಾನದ ಉಪದೇಶ ಪಡೆದಿದ್ದ ಅವನು ವೈರಾಗ್ಯ ತಳೆದಿದ್ದನು. ಧೃತರಾಷ್ಟ್ರನು ಮಾತ್ರ ಮಾಯಾ ಪ್ರಪಂಚ ಮೋಹದಿಂದ ಮುಕ್ತನಾಗಿರಲಿಲ್ಲ. ವಿದುರನು ಅವನನ್ನು ಏಕಾಂತದಲ್ಲಿ ಕಂಡು ಹೀಗೆಂದನು. "ಅಣ್ಣಾ, ನಿನಗಿನ್ನೂ ಜಗತ್ತಿನ ಮೋಹ ಕಡಿಮೆಯಾಗಿಲ್ಲವೇ? ಭೀಮನು ಎಸೆಯುವ ಕೂಳನ್ನು ತಿಂದುಕೊಂಡು ಮನೆಕಾಯುವ ನಾಯಿಯಂತೆ ಬದುಕಲು ನಿನಗೆ ಹೇಸಿಗೆಯೆನಿಸುವುದಿಲ್ಲವೇ? ಭಯಂಕರವಾದ ಕಾಲ ಬರಲಿದೆ. ವಿರಕ್ತಿ ಹೊಂದು. ಕೂಡಲೆ ಇಲ್ಲಿಂದ ಕಾಡಿಗೆ ಹೊರಟುಹೋಗು. ತಪಸ್ಸಿನಲ್ಲಿ ಕೊನೆಯ ದಿನಗಳನ್ನು ಕಳೆ".

ಈ ಮಾತುಗಳನ್ನು ಕೇಳಿದ ಧೃತರಾಷ್ಟ್ರನು ಜೀವನದಲ್ಲಿ ಜಿಗುಪ್ಸೆ ಹೊಂದಿದನು. ಕೂಡಲೇ ಗಾಂಧಾರಿ, ವಿದುರರನ್ನು ಕರೆದುಕೊಂಡು ಯಾರಿಗೂ ತಿಳಿಯದಂತೆ ರಾತ್ರಿಯೇ ಹಸ್ತಿನಾವತಿಯನ್ನು ತೊರೆದು ಹಿಮಾಲಯದತ್ತ ಹೊರಟುಬಿಟ್ಟನು.

ಪ್ರಾತಃಕಾಲ ಹಿರಿಯರನ್ನು ವಂದಿಸಲು ಬಂದ ಯುಧಿಷ್ಠಿರನು ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪನಾದ ವಿದುರನನ್ನು ಕಾಣದೆ ಗಾಬರಿಯಾದನು. ಸಂಜಯನಿಗೂ ಅವರೆಲ್ಲಿ ಹೋದರೆಂಬುದು ತಿಳಿದಿರಲಿಲ್ಲ. ಧರ್ಮರಾಯ ಮತ್ತವನ ಸೋದರರು ಹೀಗೆ ಚಿಂತಾಕ್ರಾಂತರಾಗಿದ್ದಾಗ ತುಂಬುರುವಿನ ಜೊತೆಯಲ್ಲಿ ನಾರದರು ಅಲ್ಲಿಗೆ ಬಂದರು. ಅವರು ಧೃತರಾಷ್ಟ್ರಾದಿಗಳ ವೈರಾಗ್ಯವನ್ನೂ, ಸಪ್ತರ್ಷಿ ಧಾಮದಲ್ಲಿ ಅವರು ತಪೋನಿರತರಾಗಿರುವುದನ್ನೂ ಇನ್ನು ಸ್ವಲ್ಪವೇ ದಿನಗಳಲ್ಲಿ ಧೃತರಾಷ್ಟ್ರನು ಯೋಗಾಗ್ನಿಯಲ್ಲಿ ಸುಟ್ಟು ಬೂದಿಯಾಗುವುದನ್ನು ಗೃಹ್ಯಾಗ್ನಿಗಳೊಂದಿಗೆ ಸುಡುವ ಪರ್ಣಶಾಲೆಯನ್ನರಿತು ಗಾಂಧಾರಿಯೂ ತನ್ನನ್ನು ಬೆಂಕಿಗೆ ಅರ್ಪಿಸಿಕೊಳ್ಳುವುದನ್ನೂ, ವಿದುರನು ಮತ್ತೆ ತೀರ್ಥಯಾತ್ರೆಗೆ ಹೋಗುವುದನ್ನೂ ತಿಳಿಸಿದರು. ಇದರಿಂದ ಧರ್ಮರಾಯನೂ ವೈರಾಗ್ಯವನ್ನು ತಳೆದನು.

ದ್ವಾರಕೆಯಿಂದ ಹಿಂದಿರುಗಿದ ಅರ್ಜುನನು ಯಾದವರ ನಾಶದ, ಕೃಷ್ಣ-ಬಲರಾಮರ ಅವತಾರ ಸಮಾಪ್ತಿಯ ವಾರ್ತೆಯನ್ನು ಅಣ್ಣನಿಗೆ ಹೇಳಿದನು. ಇದರಿಂದ ಯುಧಿಷ್ಠಿರನ ವೈರಾಗ್ಯ ಮತ್ತಷ್ಟು ಧೃಢವಾಯಿತು. ಮೊಮ್ಮಗನಾದ ಪರೀಕ್ಷಿತನಿಗೆ ಪಟ್ಟಕಟ್ಟಿದನು. ಕುಂತಿಯು ಭಗವಂತನಲ್ಲಿ ಮನಸ್ಸುನೆಟ್ಟು, ದೇಹವನ್ನು ಬಿಟ್ಟು ಪರಮಗತಿಯನ್ನು ಪಡೆದಳು . ಧರ್ಮರಾಯನು ಪರಮವೈರಾಗ್ಯ ಶಾಲಿಯಾಗಿ ಅರಮನೆಯಿಂದ ಹೊರಟು ಉತ್ತರ ದಿಕ್ಕಿಗೆ ನಡೆದನು. ಮಿಕ್ಕ ಪಾಂಡವರೂ ಅವನನ್ನು ಅನುಸರಿಸಿ ಹೋದರು. ದ್ರೌಪದಿಯೂ ಪತಿಯರ ವೈರಾಗ್ಯದಿಂದ ವಿರಕ್ತಳಾಗಿ ಶ್ರೀ ಕೃಷ್ಣನ ಧ್ಯಾನದಲ್ಲಿ ಮುಳುಗಿ ಮುಕ್ತಳಾದಳು. ಉತ್ತರದ ಕಡೆಗೆ ಹೋದ ಪಾಂಡವರೂ ಮುಕ್ತಿ ಹೊಂದಿದರು. ವಿದುರನು ಪ್ರಭಾಸಕ್ಷೇತ್ರಕ್ಕೆ ಹೋಗಿ ದೇಹತ್ಯಾಗ ಮಾಡಿ ಸ್ವಧಾಮ (ಯಮಲೋಕ)ಕ್ಕೆ ತೆರಳಿದನು.

ಭಾರತದ ಮತ್ತು ಭಾಗವತದ ಕಥೆಗಳಲ್ಲಿರುವ ಈ ಅಪಾರ ವ್ಯತ್ಯಾಸ ವಿಸ್ಮಯಾವಹವಲ್ಲವೇ?

### ತಾಳಮದ್ದಲೆ ಕ್ಷೇತ್ರದ ಅಗ್ರಕಲಾವಿದ

# ಬಲಗೋಣು ವೆಂಕಪ್ಪಯ್ಯ ಹೆಬ್ಬಾರ್



**-ಎಂ. ಗಣೇಶ ರಾವ್, ಬಾರಕೂರು**

ಕೊಡಲಿ ರಾಮನ ಮಣ್ಣಿನ ಕಲೆಯ ಬಡಗುತಿಟ್ಟು ಯಕ್ಷಗಾನ ಕ್ಷೇತ್ರದ ಕೂಟ ಕ್ಷೇತ್ರದಲ್ಲಿ (ತಾಳಮದ್ದಲೆ) ಹಲವಾರು ಕಲಾವಿದರು ಆಳಿಹೋಗಿದ್ದಾರೆ. ತಮ್ಮ ಅಪ್ರತಿಮ ಪ್ರಖರ ಪ್ರತ್ಯುತ್ಪನ್ನ ವ್ಯಕ್ತಿತ್ವದಿಂದ ರಾರಾಜಿಸಿದ್ದಾರೆ. ಅಂತಹವರಲ್ಲಿ ಓರ್ವ ಕಲಾವಿದ ನಮ್ಮ ಸಮಾಜದವರೇ ಆದ ಬಲಗೋಣು ವೆಂಕಪ್ಪಯ್ಯ ಹೆಬ್ಬಾರರು.

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಬಲಗೋಣು ಎಂಬಲ್ಲಿ 1938ರಲ್ಲಿ ಪಣಿಯಪ್ಪಯ್ಯ (ತಂದೆ) ಸರಸ್ವತಿಯಮ್ಮ (ತಾಯಿ)ನವರ ಮಗನಾಗಿ ಹುಟ್ಟಿದರು. ಇವರ ತಂದೆಯವರು ಆಗಿನ ಕಾಲದ ಪ್ರಸಿದ ಅರ್ಥದಾರಿಯಾಗಿದ್ದರು. ಶಾಲೆಗೆ 7ನೇ ತರಗತಿಗೆ ಶರಣು ಹೊಡೆದು ತಮ್ಮನ್ನು ಯಕ್ಷಗಾನ ಕ್ಷೇತ್ರಕ್ಕೆ ತೊಡಗಿಸಿಕೊಂಡರು. ನೃತ್ಯಾಭ್ಯಾಸವನ್ನು ಧನಂಜಯ ಶೆಟ್ಟಿಯವರಲ್ಲಿ ಕಲಿತರು. ತಮ್ಮ 20ನೇ ವಯಸ್ಸಿನಲ್ಲೇ ಯಕ್ಷಗಾನ ಕ್ಷೇತ್ರದ ಮಾತಿನ ಕ್ಷೇತ್ರವಾದ ತಾಳಮದ್ದಲೆ ಆಯಾಮದಲ್ಲಿ ತೊಡಗಿಸಿಕೊಂಡರು. ರಾಮಾಯಣ-ಮಹಾಭಾರತ ಪುಸ್ತಕಗಳನ್ನು ಓದಿ ಅದನ್ನು ಮನನ ಮಾಡಿಕೊಂಡು ತಮ್ಮ ಅರ್ಥಗಾರಿಕೆಯಲ್ಲಿ ಪ್ರಬುದತೆಯನ್ನು ತಿದ್ದಿತೀಡಿಕೊಂಡರು. ಮರವಂತೆಯ ದಾಸದ್ವಯರು, ದಾಸಕಾಮತ್ ಮುಂತಾದ ಹಿಮ್ಮೇಳದ ಭಾಗವತರುಗಳು ಇವರಿಗೆ ತಾವು ಭಾಗವಹಿಸುತ್ತಿದ್ದ ತಾಳಮದ್ದಲೆ ಕಾರ್ಯಕ್ರಮಗಳಲ್ಲಿ ಅನೇಕ ಅವಕಾಶಗಳನ್ನು ನೀಡುತ್ತಿದ್ದರು. ತಮ್ಮ ಅರ್ಥಗಾರಿಕೆಯ ಸಮಯದಲ್ಲಿ ಕೂರಾಡಿ ಸದಾಶಿವ ಕಲ್ಕೂರ, ಬೈಂದೂರಿನ ಪಡುವರಿ ನಾರಾಯಣರಾವ್, ಬಿ. ವಿಶ್ವೇಶ್ವರ ಅಡಿಗ ಬಿಜೂರು, ಪಿ. ಶೇಷಪ್ಪಯ್ಯ, ಅನಂತ ಆರ್. ಪೈ ಮುಂತಾದವರೊಡಗೂಡಿ ತಮ್ಮ ಅರ್ಥಗಾರಿಕೆಯ ವೈಭವವನ್ನು ಸಾಕ್ಷಾತ್ಕರಿಸುತ್ತಿದ್ದರು.

ಕರ್ಣಾರ್ಜುನ ಕಾಳಗದ ಕೃಷ್ಣ, ಶಲ್ಯ, ರಾಮ, ಸತ್ರಾಜಿತ, ಜಟಾಯು ಮುಂತಾದ ಪುರುಷ ಪಾತ್ರಗಳು ಹಾಗೂ ಸುಭದ್ರ, ದ್ರೌಪದಿ ಪ್ರಭಾವತಿ ಮುಂತಾದ ಸ್ತ್ರೀ ಪಾತ್ರಗಳನ್ನು ಲೀಲಾಜಾಲವಾಗಿ ಮಾತಿನ ಮೂಲಕ ಅರ್ಥಗಾರಿಕೆಯಲ್ಲಿ ಕಡೆದು ನಿಲ್ಲಿಸುತ್ತಿದ್ದರು. ಎದುರು ಮಾತುಗಾರನ ಮಾತಿನ ಅರ್ಥವನ್ನು ಗಮನಿಸಿ ಹಾಗೂ ಕುಳಿತ ಪ್ರೇಕ್ಷಕರ ಉತ್ಸಾಹವನ್ನು ತಣಿಸದೇ ಎಲ್ಲರೂ ಮೆಚ್ಚುವಂತೆ ತಮ್ಮ ಮಾತುಗಾರಿಕೆಯನ್ನು ಮರೆಸುತ್ತಿದ್ದರು.

ಭೀಷ್ಮ ವಿಜಯದ ಭೀಷ್ಮ, ಸಂಧಾನದ ಕೌರವ ಇವರಿಗೆ ಹೆಸರನ್ನು ತಂದುಕೊಟ್ಟ ಪಾತ್ರಗಳಾಗಿದ್ದವು. ಕೂರಾಡಿ ಕಲ್ಕೂರರ ಭೀಷ್ಮ ಇವರ ಪರಶುರಾಮ ಆ ಕಾಲದಲ್ಲಿ ಅಪಾರವಾಗಿ ಮೆರೆದ ಯಕ್ಷಕೂಟ ಕ್ಷೇತ್ರದ ಜೋಡಿಯಾಗಿತ್ತು. ಶಿರೂರು ವಿನಾಯಕ ಶ್ಯಾನುಭಾಗರು ಕೂಡಾ ಇದರ ಅರ್ಥಗಾರಿಕೆ ಕ್ಷೇತ್ರದ ಒಡನಾಡಿಯಾಗಿದ್ದರು.

ಶೇಣಿ ಗೋಪಾಲಕೃಷ್ಣ ಭಟ್ಟ, ದೇರಾಜೆ ಸೀತಾರಾಮಯ್ಯ ಮುಂತಾದವರ ಅರ್ಥಗಾರಿಕೆಯನ್ನು ಇವರು ಬಹುವಾಗಿ ಮೆಚ್ಚಿಕೊಂಡಿದ್ದರು ಮತ್ತು ತಮ್ಮ ಅರ್ಥಗಾರಿಕೆಯ ಅನುಭವವನ್ನು ತಿದ್ದಿಕೊಳ್ಳುವಲ್ಲಿ ಸಹಕಾರಿಯಾಯಿತು ಎಂದು ಸಂತಸದಿಂದ ಹೇಳಿಕೊಳ್ಳುತ್ತಾರೆ.

ತಾಳಮದ್ದಲೆ ಕ್ಷೇತ್ರವಲ್ಲದೆ ವೇಷಗಾರಿಕೆಯನ್ನು ಸಹ ಇವರು ಹಲವಾರು ಬಾರಿ ಮಾಡಿದ್ದಾರೆ. ಅನೇಕ ಪಾತ್ರಗಳು ಇವರಿಗೆ ಹೆಸರನ್ನು ತಂದುಕೊಟ್ಟಿವೆ. ಪೌರಾಣಿಕ ಕಥೆಗಳನ್ನು ತುಂಬಾ ಮೆಚ್ಚುವ ಇವರು ಅದರಲ್ಲಿ ಸತ್ವಯಿದೆ, ತಿಳಿಯುವಂತಹ ವಿಚಾರಗಳು ಇವೆ ಮತ್ತು ಜನರಿಗೆ ಬದುಕನ್ನು ರೂಪಿಸಿಕೊಳ್ಳಲು ಅವಕಾಶವಿರುತ್ತದೆ ಎಂದು ನುಡಿಯುತ್ತಾರೆ.

ಹೆಗ್ಗುಡಿ ಸಿದಿವಿನಾಯಕ ದೇವಾಲಯದಲ್ಲಿ ಸಂಘದ ವತಿಯಿಂದ ಸನ್ಮಾನ ಕಾರ್ಯಕ್ರಮವನ್ನು ಇವರಿಗೆ ನಡೆಸಲಾಗಿತ್ತು. ಯಾವುದೇ ರೀತಿಯ ಅಶ್ಲೀಲತೆಗೆ ಇವರ ಅರ್ಥಗಾರಿಕೆಯಲ್ಲಿ ಅವಕಾಶ ಇಲ್ಲವಾಗಿತ್ತು.

ಅನೇಕ ಕಿರಿಯ ಯಕ್ಷಗಾನ ಕಲಾವಿದರು ಇಂದೂ ಕೂಡಾ ಇವರಿಂದ ಅರ್ಥಗಾರಿಕೆಯನ್ನು ತಿಳಿಯಲು ಮತ್ತು ಕಲಿಯಲು ಇವರ ಮನೆಗೆ ಬರುತ್ತಿದ್ದಾರೆ. ಇವರು ಯಾವುದೇ ರೀತಿಯ ಪ್ರತಿಫಲವನ್ನು ಪಡೆಯದೇ ತಮ್ಮ ಅನುಭವವನ್ನು ಕಿರಿಯರಿಗೆ ಧಾರೆ ಎರೆಯುತ್ತಿದ್ದಾರೆ.

ಬಂದುದನ್ನು ಬಂದಂತೆ ಸ್ವೀಕರಿಸಿದ ಇವರು ತಮ್ಮ ಅರ್ಥಗಾರಿಕೆಯ ಕ್ಷೇತ್ರದಲ್ಲಿ ಆದಿಯಿಂದ ಅಂತ್ಯದ ವರೆಗೂ ಕೂಡಾ ರಂಗ ನೈರ್ಮಲ್ಯವನ್ನು ಅಚ್ಚುಕಟ್ಟಾಗಿ ನಿರೂಪಿಸುತ್ತಿದ್ದರು. ಎಲೆಮರೆಯ ಕಾಯಿಯಾಗಿ ಇವರು ತಮ್ಮ ಬದುಕನ್ನು ನಡೆಸಿಕೊಂಡು ಬಂದವರು. ಪತ್ನಿ ಗಿರಿಜಾ ಹಾಗೂ 3 ಗಂಡು 1 ಹೆಣ್ಣು ಮಕ್ಕಳ ತುಂಬುಸಂಸಾರ ಇವರದು. ಇವರಿಂದ ಮುಂದೆಯೂ ತಾಳಮದ್ದಲೆ ಕ್ಷೇತ್ರಕ್ಕೆ ಹೆಚ್ಚಿನ ಕೊಡುಗೆ ಸಲ್ಲಲಿ ಎಂದು ಶ್ರೀಶಾರದಾ ಹಾರೈಕೆ.

**PRAMOD**
**AUTOMOBILES**
KARANGALPADY, MANGALORE - 575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. : **Ln. K. HARSHA KUMAR**

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
**ಫೋನ್ : 2454355, ಮೊಬೈಲ್ : 94485 45702**

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ
